ಆ) ರಾಜ್ಯದಲ್ಲಿರುವ 224 ವಿಧಾನ ಸಭಾ ಕ್ಷೇತ್ರದ ಆರಾಧನಾ ಸಮಿತಿ ರಚನೆಗೆ ಸಂಬಂದಿಸಿದಂತೆ ಈಗಾಗಲೇ 105 ಕ್ಷೇತ್ರಗಳಿಗೆ ಸಮಿತಿಗಳನ್ನು ರಚಿಸಲಾಗಿದೆ 69 ಕ್ಷೇತ್ರಗಳಿಗೆ ಸಮಿತಿ ರಚಿಸಲು ಪರಿಶೀಲಿಸಲಾಗುತ್ತಿದೆ ಉಳಿದ 50 ಕ್ಷೇತ್ರಗಳ ಸಮಿತಿ ರಚಿಸಲು ಪ್ರಸ್ತಾವನೆಗಳನ್ನು ನಿರೀಕ್ಷಿಸಲಾಗುತ್ತಿದೆ ಆದಕಾರಣ ಈ ಬಗ್ಗೆ ಸರ್ಕಾರದಿಂದ ಯಾವುದೇ ವಿಳಂಬವಾಗಿಲ್ಲ

757 (1286) ಶ್ರೀ ಕೃಷ್ಣಮೂರ್ತಿ ಕೆ ಎಂ (ಕಡೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಡೂರು ತಾಲ್ಲೂಕು ಬರಪೀಡಿತ ಪ್ರದೇಶ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಕಡೂರು ತಾಲ್ಲೂಕಿಗೆ ಬರ ನಿರ್ವಹಣೆಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಆರ್ಥಿಕ ನೆರವು ಎಷ್ಟು ,

ಇ) ಹಾಗಿದ್ದಲ್ಲಿ, ಇನ್ನು ಮುಂದೆ ಬಿಡುಗಡೆ ಮಾಡಬೇಕಾಗಿರುವ ಆರ್ಥಿಕ ನೆರವು ಎಷ್ಟು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಹೌದು, ಕಡೂರು ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಲಾಗಿದೆ

ಆ) ಕಡೂರು ತಾಲ್ಲೂಕಿನಲ್ಲಿ ಬರ ಪರಿಹಾರ ಕೈಗೊಳ್ಳಲು ಒಟ್ಟು ರೂ 100 ಕೋಟಿ ಹಣ ಬಿಡುಗಡೆ ಮಾಡಿದೆ ಹಾಗೂ 1000 ಮೆ ಟನ್ ಆಹಾರಧಾನ್ಯ ಹಾಗೂ ಕುಡಿಯುವ ನೀರು ಸರಬರಾಜಿಗೆ ರೂ 25 00 ಲಕ್ಷ ಹಣ ಜಿಲ್ಲೆಗೆ ಬಿಡುಗಡೆ ಮಾಡಿದೆ

ಇ) ಬರ ಪರಿಸ್ಥಿತಿ ತೀವ್ರತೆಗನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುವುದು

758 (379) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪರವಾನಗಿ ಪಡೆದು ಸಾರಾಯಿ ಮಾರಾಟ ಮಾಡುತ್ತಿರುವ ಅಂಗಡಿಗಳೆಷ್ಟು , (ಜಿಲ್ಲಾವಾರು ಮಾಹಿತಿ ನೀಡುವುದು) ,

ಆ) ರಾಜ್ಯದಲ್ಲಿ ಅನಧಿಕೃತವಾಗಿ ನಡೆಸುತ್ತಿರುವ ಸಾರಾಯಿ ಅಂಗಡಿಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಹಾಗಿದ್ದಲ್ಲಿ, ಇವುಗಳನ್ನು ತೆರವು ಮಾಡುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ 15248 ಪರವಾನಗಿ ಪಡೆದ ಸಾರಾಯಿ ಅಂಗಡಿಗಳು ಇರುತ್ತವೆ ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿವೆ

ಕ್ರ.ಸಂ	ಜಿಲ್ಲೆ	2006-07 ಸಾರಾಯಿ ಅಂಗಡಿಗಳ ಸಂಖ್ಯೆ
1	ಬೆಂಗಳೂರು ನಗರ	1088
2	ಬೆಂಗಳೂರು ಗ್ರಾಮಾಂತರ	624
3	ಬಾಗಲಕೋಟೆ	422
4	ಬೆಳಗಾಂ	776
5	ಬಳ್ಳಾರಿ	544
6	ಬೀದರ್	432
7	ಬಿಜಾಪುರ	398
8	ಚಾಮರಾಜನಗರ	215
9	ಚಿಕ್ಕಮಗಳೂರು	456
10	ಚಿತ್ರದುರ್ಗ	506
11	ದಕ್ಷಿಣ ಕನ್ನಡ	715
12	ದಾವಣಗೆರೆ	511
13	ಧಾರವಾಡ	464
14	ಗದಗ	319
15	ಗುಲ್ಬರ್ಗಾ	826
16	ಹಾಸನ	720
17	ಹಾವೇರಿ	424
18	ಕೊಡಗು	432
19	ಕೋಲಾರ	854
20	ಕೊಪ್ಪಳ	364
21	ಮಂಡ್ಯ	602
22	ಮೈಸೂರು	864
23	ರಾಯಚೂರು	429
24	ಶಿವಮೊಗ್ಗ	517
25	ತುಮಕೂರು	849
26	ಉಡುಪಿ	367
27	ಉತ್ತರ ಕನ್ನಡ	530
	ಒಟ್ಟು	**15248**

ಆ) ಬಂದಿದೆ

ಇ) ಜಾರಿ ಮತ್ತು ತನಿಖೆ ಹಾಗೂ ವಲಯ ಸಿಬ್ಬಂದಿಯವರಿಗೆ ನಿಯಮಿತವಾಗಿ ಅಬಕಾರಿ ದಾಳಿ ಹಾಗೂ ಗಸ್ತು ನಡೆಸಿ ಅಕ್ರಮಗಳು ಜರುಗದಂತೆ ಕಟ್ಟೆಚ್ಚರವಹಿಸಲು ಸೂಚಿಸಿದೆ ಹಾಗೂ ಅಕ್ರಮಗಳು ಕಂಡಬಂದಲ್ಲಿ ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲು ಸೂಚಿಸಿದೆ

759 (380) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಸುತ್ತಮುತ್ತ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಉದ್ದೇಶ ಸರ್ಕಾರದ ಆಲೋಚನೆಯಲ್ಲಿದೆಯೇ ,

ಆ) ಹಾಗಿದ್ದಲ್ಲಿ, ಅಗತ್ಯವಿರುವಷ್ಟು ಭೂಮಿ ಲಭ್ಯವಿದೆಯೇ , ಹಾಗಿಲ್ಲದಿದ್ದಲ್ಲಿ, ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ , (ಗ್ರಾಮವಾರು ಸರ್ವೆ ನಂಬರ್ ಮತ್ತು ವಿಸ್ತೀರ್ಣದ ವಿವರ ನೀಡುವುದು) ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಹೌದು

ಆ) ಅಗತ್ಯವಿರುವಷ್ಟು ಭೂಮಿ ಲಭ್ಯವಿಲ್ಲದಿರುವುದರಿಂದ ತುಮಕೂರು ಸಿರಾ ಮಧ್ಯೆ ರಾಷ್ಟ್ರೀಯ ಹೆದ್ದಾರಿ 4ಕ್ಕೆ ಹೊಂದಿಕೊಂಡಂತೆ ತುಮಕೂರು ತಾಲ್ಲೂಕು, ಕೋರ ಹೋಬಳಿ, ವಸಂತನರಸಾಪುರ, ಕೆಂಪನ ದೊಡ್ಡೇರಿ, ನಾಗೇನಹಳ್ಳಿ ಮತ್ತು ಬೆಳ್ಳಾವಿ ಹೋಬಳಿ ತಿಮ್ಮರಾಜನಹಳ್ಳಿ ಹಾಗೂ ಗಿರಿಯನ ಹಳ್ಳಿ ಗ್ರಾಮಗಳಲ್ಲಿ ಒಟ್ಟು ವಿಸ್ತೀರ್ಣ 788 ಎಕರೆ 33 ಗುಂಟೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕೆಐಎಡಿ ಕಾಯ್ದೆ 1966ರ ಕಲಂ 28 (4)ರನ್ವಯ ಅಂತಿಮ ಅಧಿಸೂಚನೆ ಹೊರಡಿಸುವ ನಿಟ್ಟಿನಲ್ಲಿ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

(ಗ್ರಾಮವಾರು ಸರ್ವೆ ನಂಬರ್ ಮತ್ತು ವಿಸ್ತೀರ್ಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

760 (885) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಪಿಂಚಣಿ ಪಡೆಯುತ್ತಿರುವ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ಎಷ್ಟು , (ಜಿಲ್ಲಾವಾರು ವಿವರ ನೀಡುವುದು) ,

ಆ) ಸ್ವಾತಂತ್ರ್ಯ ಹೋರಾಟಗಾರರು ಮೃತರಾದ ಸಂದರ್ಭದಲ್ಲಿ ಶವಸಂಸ್ಕಾರ ಮಾಡಲು ಮೃತರ ಕುಟುಂಬದವರಿಗೆ ಸರ್ಕಾರದ ವತಿಯಿಂದ ನೀಡುವ ಅನುದಾನವೆಷ್ಟು ,

ಇ) ಹಾಗಿದ್ದಲ್ಲಿ, ಶವಸಂಸ್ಕಾರಕ್ಕೆ ನೀಡಿದ ಅನುದಾನ ತುಮಕೂರು ಜಿಲ್ಲಾಧಿಕಾರಿಗಳಿಂದ ಈವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು , (ಪ್ರಕರಣವಾರು ಹಣದ ವಿವರ ನೀಡುವುದು) ?